O.S. NO. 80/2019
PW - 1.
Dated 29-11-2024.

ಸಾಕ್ಷಿಯನ್ನು ಈ ದಿನ ದಿನಾಂಕ 29-11-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 1 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದಃ

ನನ್ನ ಶಿಕ್ಷಣ 6 ನೇ ತರಗತಿವರೆಗೆ ಆಗಿರುತ್ತದೆ. ನನಗೆ ಓದು ಬರಹ ಬರುವುದಿಲ್ಲ. ಸಹಿ ಮಾಡಲು ಮಾತ್ರ ಬರುತ್ತದೆ. ವಾದ ಪತ್ರ ಬರೆಯಲು ಮಾಹಿತಿ ನಾನೇ ಮತ್ತು ನನ್ನ ಅಕ್ಕ ತಂಗಿಯರು ಸೇರಿ ಕೊಟ್ಟಿರುತ್ತೇವೆ. ನಾನು ನನ್ನ ಮತ್ತು ನನ್ನ ಅಕ್ಕ ತಂಗಿಯರಾದ ಉಳಿದ ವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನಗೆ ನನ್ನ ಅಕ್ಕ ತಂಗಿಯರು ಅವರ ಪರವಾಗಿ ಸಾಕ್ಷಿ ನುಡಿಯುವಂತೆ ಅಧಿಕಾರ ಪತ್ರ ಬರೆದು ಕೊಟ್ಟಿಲ್ಲ. ಈ ದಾವೆಯನ್ನು 3 ಜನ ಅಣ್ಣ ತಮ್ಮಂದಿರ ವಿರುದ್ಧ ಹಾಕಿರುತ್ತೇವೆ. ಅವರ ಹೆಸರು ಚನ್ನಪ್ಪ, ಮಲ್ಲಪ್ಪ ಮತ್ತು ಅಶೋಕ. ದಾವಾ ಆಸ್ತಿಗಳು ಎಷ್ಟು ಇವೆ ಮತ್ತು ಸರ್ವೆ ನಂಬರಗಳು ಹೇಳಲು ಬರುತ್ತಾ ಎಂದರೆ ಸರ್ವೆ ನಂಬರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಒಟ್ಟು 13 ಎಕರೆ ಇರುತ್ತದೆ. ದಾವಾ ಆಸ್ತಿಗಳು ಏನು ಏನು ಇದೆ ಎಂದರೆ ಸಾಕ್ಷಿ ಜಮಿನುಗಳು ಇರುತ್ತವೆ, ಒಂದು ಹೊಲದಲ್ಲಿ ಮನೆ ಕಟ್ಟಿದ್ದು ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾವಾ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳ ಮೇಲೆ ನಾವು ದಾವೆ ಮಾಡಿಲ್ಲ. ಹೊಲದಲ್ಲಿ ಇರುವ ಮನೆ ನನ್ನ ಅಣ್ಣ 1 ನೇ ಪ್ರತಿವಾದಿ ಚನ್ನಪ್ಪ ಕಟ್ಟಿರುತ್ತಾನೆ. ಯಾವ ಸರ್ವೆ ನಂಬರ ಹೊಲದಲ್ಲಿ ಕಟ್ಟಿದ್ದಾರೆ ಎಂದರೆ ನನಗೆ ಸರ್ವೆ ನಂಬರ ನೆನಪಿಲ್ಲ. ದಾವಾ

ಜಮಿನುಗಳು ಎಷ್ಟು ಹೊಲಗಳು ಮತ್ತು ಎಷ್ಟು ಕ್ಷೇತ್ರ ಇವೆ ಎಂದು ನನಗೆ ಹೇಳಲು ಬರುವುದಿಲ್ಲ.

ನಮ್ಮ ತಂದೆಗೆ ನಾವು 9 ಜನ ಮಕ್ಕಳು ಇರುತ್ತೇವೆ. ಅವರು ಎಂದರೆ ನಾನು, ಪಾರ್ವತಿ, ಈರವ್ವ, ಸಾಂವಕ್ಕ, ಕಸ್ತೂರಿ, ನೀಲವ್ವ , ಚನ್ನಪ್ಪ, ಮಲ್ಲಪ್ಪ, ಮತ್ತು ಅಶೋಕ. ನನ್ನ ತಂದೆಯ ತಂದೆ ಹೆಸರು ಗಂಗಪ್ಪ. ನನ್ನ ತಂದೆ ದೊಡ್ಡಫಕೀರಪ್ಪರವರು ಬಸಲಿಂಗಪ್ಪ ನಾವಲಗಿ ರವರ ಕುಟುಂಬಕ್ಕೆ ದತ್ತಕ್ಕೆ ಹೊಗಿರುತ್ತಾರೆ ಎಂದರೆ ಸರಿಯಲ್ಲ. ಬಸಲಿಂಗಪ್ಪ ನಾವಲಗಿ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದೊಡ್ಡಫಕೀರಪ್ಪರವರು ಬಸಲಿಂಗಪ್ಪ ನಾವಲಗಿ ರವರ ಕುಟುಂಬಕ್ಕೆ ದತ್ತಕ್ಕೆ ಹೊಗಿದ್ದ ವಿಷಯ ನನಗೆ ಗೊತ್ತಿದ್ದರೂ ಸಹ ಬಸಲಿಂಗಪ್ಪ ನಾವಲಗಿ ಯಾರು ಎಂದು ಗೊತ್ತಿಲ್ಲ ಮತ್ತು ನನ್ನ ತಂದೆ ದತ್ತಕ್ಕೆ ಹೊಗಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ದೊಡ್ಡಫಕೀರಪ್ಪರವರಿಗೆ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ಗೊತ್ತಾ ಎಂದು ಸೂಚಿಸಲಾಗಿ ಸಾಕ್ಷಿ ನನ್ನ ತಂದೆ ಆಸ್ತಿಗಳು ಎಂದು ಮಾತ್ರ ನನಗೆ ಗೊತ್ತಿದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳ ಎಲ್ಲ ದಾಖಲೆಗಳಲ್ಲಿ ನನ್ನ ತಂದೆ ಹೆಸರು ನನ್ನ ತಂದೆ ದೊಡ್ಡಫಕೀರಪ್ಪ ದತ್ತಕ ತಂದೆ ಬಸಲಿಂಗಪ್ಪ ನಾವಲಗಿ ಅಂತಾ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಬರೆದಿರುವ ವಿಷಯ ನನ್ನ ವಕೀಲರಿಂದ ನಾನು

ಓದಿಸಿ ತಿಳಿದು ಕೊಂಡಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ನಾನು ಹಾಜರುಪಡಿಸಿದ ದಾಖಲೆಗಳು ಓದಿಸಿ ತಿಳಿದುಕೊಂಡಿಲ್ಲ. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆ ಎಂದರೆ ಇಂಗ್ಲೀಷನಲ್ಲಿ ಬರೆದಿರುವುದರಿಂದ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ವಾಟ್ನಿ ಪತ್ರದಲ್ಲಿ ಸಹ ನನ್ನ ತಂದೆ ಹೆಸರು ದೊಡ್ಡಫಕೀರಪ್ಪ ದತ್ತಕ ತಂದೆ ಬಸಲಿಂಗಪ್ಪ ನಾವಲಗಿ ಅಂತಾ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಂದೆಯ ಜನಕ ತಂದೆ ಗಂಗಪ್ಪರಿಂದ ಬಂದಂತಹ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಪ್ರತ್ಯೇಕವಾದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ.

ನನ್ನ ಮತ್ತು ನನ್ನ ಸಹೋದರಿಯರು ಮದುವೆ ನನ್ನ ತಂದೆಯವರೇ ಮಾಡಿರುತ್ತಾರೆ ಎಂದರೆ ನಿಜ. ನಮ್ಮ ಕುಟುಂಬದ ಕರ್ತಾ ನನ್ನ ತಂದೆಯವರೇ ಎಂದರೆ ನಿಜ. ನಾನು ಹಾಜರುಪಡಿಸಿದ ನಿಪಿ - 1 ವಾಟ್ನಿ ಪತ್ರ ನನ್ನ ತಂದೆ ಜೀವಿತಾವದಿಯಲ್ಲಿದ್ದಾಗ ತಾನೇ ಬರೆದು ಕೊಟ್ಟಿರುವ ವಾಟ್ನಿ ಪತ್ರ ಎಂದರೆ ಸರಿಯಲ್ಲ. ನನ್ನ ಎಷ್ಟನೇ ಇಸ್ವಿಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಇಸ್ವಿ ನೆನಪಿಲ್ಲ. ನನ್ನ ತಂದೆ ದಿನಾಂಕ 08-08-2012 ರಂದು ಮೃ ಪಟ್ಟಿರುತ್ತಾರೆ ಎಂದರೆ ನಿಜ. ನನ್ನ ತಾಯಿ 2013 ರಲ್ಲಿ ಮೃತಪಟ್ಟಿರುತ್ತಾಳೆ. ನಿಪಿ - 1 ವಾಟ್ನಿ ಪತ್ರ ದಿನಾಂಕ 02-09-2009 ರಂದು ನನ್ನ ತಂದೆ ಮತ್ತು ನನ್ನ ಸಹೋದರರ ಮದ್ಯೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಆಸ್ತಿಗಳು ತನ್ನ ಪ್ರತ್ಯೇಕ ಆಸಿಗಳು

O.S. NO. 80/2019
PW - 1.
Dated 29-11-2024.

ಎಂದು ಗೊತ್ತಿದ್ದುದರಿಂದ ತನ್ನ ಗಂಡು ಮಕ್ಕಳ ಮಧ್ಯೆ ಮಾತ್ರ ನಿಪಿ - 1 ರಂತೆ ವಾಟ್ನಿ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ತಮ್ಮ ಜೀವಿತ ಅವದಿಯಲ್ಲಿ ನಿಪಿ - 1 ವಾಟ್ನಿ ಪತ್ರ ಖೊಟ್ಟಿ ಇರುತ್ತದೆ ಅಂತಾ ಅವರು ಎಲ್ಲಿಯೂ ಸಹ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.